ಡಿಪಾರ್ಟ್‌ಮೆಂಟ್‌ನವರು ಎಲ್ಲಾ ಬ್ಯಾಂಕಿನವರನ್ನೂ ಕರೆದು ಅಡ್ವೈಸ್ ಮಾಡಿ ಎಂದು ಹೇಳಿದ್ದೇವೆ. ಆ ರೀತಿ ಮಾಡಿ ಸರಿಯಾದ ವ್ಯವಸ್ಥೆ ಮಾಡೋಣ.

ಅನಿಲ ಸ್ಥಾವರಗಳು

2037-ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1982-83 ರಿಂದ 1985-86 ರವರೆಗೆ ಒಟ್ಟು ಸ್ಥಾಪಿಸಲಾಗಿರುವ ಅನಿಲ (ಗೋಬರ್) ಯಂತ್ರಗಳು ಎಷ್ಟು?

ಆ) ಈ ಪೈಕಿ 74 ಅನಿಲ ಯಂತ್ರಗಳು : (ಡೂಮ್ ಮಾದರಿ ಅನಿಲ ಯಂತ್ರಗಳು) ಸ್ಥಾಪನೆಯಾಗಿರುವುದು ನಿಜವೇ?

ಇ) ಈ ಪೈಕಿ 66 ಅನಿಲ ಯಂತ್ರಗಳು : ಕಾರ್ಯನಿರ್ವಹಿಸದೇ ಕೆಟ್ಟು ಹೋಗಿರುವುದು ನಿಜವೇ?

ಈ) ಅದಕ್ಕೆ ಕಾರಣವೇನು ಹಾಗೂ ಅವುಗಳ ದುರಸ್ತಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಉ) ಕೆಟ್ಟು ಹೋದ ಅನಿಲ ಯಂತ್ರಗಳಿಗೆ 2,000 ರೂ.ಗಳಿಂದ 2,500 ರೂ.ಗಳವರೆಗೆ ಸಹಾಯಧನ ನೀಡಲಾಗುತ್ತಿರುವುದು ನಿಜವೇ?

ಊ) ಕೆಟ್ಟು ಹೋದ ಅನಿಲ ಯಂತ್ರಗಳನ್ನು ದುರಸ್ತಿಗೊಳಿಸಲು ಸಾಧ್ಯವಾಗದಿದ್ದಲ್ಲಿ ಸದರಿ ಸಾಲವನ್ನು ಮನ್ನಾ ಮಾಡಲು ಅವಕಾಶವಿದೆಯೇ?

ಋ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ಹಾಗೂ ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 15,481 ಸ್ಥಾವರಗಳು.

ಆ) 15,481 ಸ್ಥಾವರಗಳ ಪೈಕಿ 3,036 ಡೂಮ್ ಮಾದರಿ ಸ್ಥಾವರಗಳು.

ಇ) ಸುಮಾರು 2000 ಭಾಗ್ಯಲಕ್ಷ್ಮಿ ಮಾದರಿ ಸ್ಥಾವರಗಳು ಕಾರ್ಯನಿರ್ವಹಿಸಲಿಲ್ಲ.

ಈ)

1. ನಿರ್ಮಾಣದ ದೋಷದಿಂದ ಪಚನತೊಟ್ಟಿ (ಡೈಜೆಸ್ಟರ್) ಗೋಡೆಗಳು ಹಾಗೂ ಸಿಮೆಂಟ್ ಕಾಂಕ್ರೀಟ್ ಗುಮ್ಮಟ (ಡೂಮ್) ದಲ್ಲಿ ಬಿರುಕುಗಳಾಗಿ ಅನಿಲ ಸೋರಿ ಹೋಗುವುದು.
2. ಲಭ್ಯವಾಗುವ ಸಗಣಿಯನ್ನು ಸರಿಯಾಗಿ ಅಂದಾಜು ಮಾಡದೆ ಹೆಚ್ಚಿನ ಗಾತ್ರದ ಸ್ಥಾವರಗಳನ್ನು ನಿರ್ಮಿಸಿರುವುದು.
3. ಕ್ಷೇತ್ರ ಕಾರ್ಯಕರ್ತರಲ್ಲಿ ತಾಂತ್ರಿಕ ಜ್ಞಾನ ಕೊರತೆ ಇರುವುದು. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ದುರಸ್ತಿಗಾಗಿ: ಪುನರ್ ರಚನೆಗಾಗಿ ಈ ಮಾದರಿ ಸ್ಥಾವರಗಳಿಗೆ ವಿಶೇಷ ದುರಸ್ತಿ ಸಹಾಯಧನ 400 ಸ್ಥಾವರಗಳಿಗೆ ಸ್ಥಾವರ ಒಂದಕ್ಕೆ ರೂ. 2,500 ಗಳವರೆಗೂ ಕೊಡುವುದಕ್ಕೆ ಕೇಂದ್ರ ಒಪ್ಪಿಕೊಂಡಿದೆ. ಈ ವಿಶೇಷ ಸೌಲಭ್ಯ ಉಪಯೋಗ ಮಾಡಿಕೊಂಡು ಇಲ್ಲಿಯವರೆಗೆ240 ಫಲಾನುಭವಿಗಳು ಮಾತ್ರ ಸ್ಥಾವರ ದುರಸ್ತಿ ಮಾಡಿಕೊಂಡಿರುತ್ತಾರೆ. ಸಾಮಾನ್ಯವಾಗಿ ಸ್ಥಾವರ ದುರಸ್ತಿಗೆಂದು ಕೇಂದ್ರ ಸರ್ಕಾರದ ಸಹಾಯಧನ ಗರಿಷ್ಠ ರೂ.750-00 ವರೆಗೆ ನೀಡುವ ಅವಕಾಶವಿರುತ್ತದೆ. ಇದಕ್ಕಿಂತ ಖರ್ಚು ಹೆಚ್ಚಾದಲ್ಲಿ ಪ್ರತಿ ಪ್ರಕರಣದ ಆಧಾರದ ಮೇಲೆ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಪ್ರಸ್ತಾವನೆಯನ್ನು

ಕಳಿಸಬೇಕಾಗುತ್ತದೆ. ಈ ರೀತಿ ಸೂಕ್ತ ಕ್ರಮ ತೆಗೆದುಕೊಳ್ಳಲು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಆಗಾಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

ಊ) ಮೇಲೆ ವಿವರಿಸಲಾಗಿದೆ.

ಋ) ಇಲ್ಲ.

ಋ) ಬ್ಯಾಂಕಿನವರು ಸಾಲ ಮನ್ನಾ ಮಾಡಲು ಒಪ್ಪಿರುವುದಿಲ್ಲ. ಆದರೆ ಸರ್ಕಾರವತಿಯಿಂದ ಕಾರ್ಯನಿರ್ವಹಿಸದೇ ಇರುವ ಭಾಗ್ಯಲಕ್ಷ್ಮಿ ಸ್ಥಾವರಗಳ ಸಮೀಕ್ಷೆ ನಡೆಸಿ ಮತ್ತು ಕೇಂದ್ರ ಸರ್ಕಾರ ನೀಡುವ ಧನಸಹಾಯ ಸೌಲಭ್ಯ ಉಪಯೋಗಿಸಿಕೊಂಡು ದುರಸ್ತಿ ಮಾಡಲಾಗುವಂತಹ ಸ್ಥಾವರಗಳನ್ನು ದುರಸ್ತಿ ಮಾಡಲಾಗುವುದು.

ಶ್ರೀ ಎಸ್. ರುದ್ರಪ್ಪ : ರಾಜ್ಯದಲ್ಲಿ 1982-83 ರಿಂದ 1985-86 ರವರೆಗೆ ಒಟ್ಟು ಸ್ಥಾಪಿಸಲಾಗಿರುವ ಅನಿಲ ಯಂತ್ರಗಳೆಷ್ಟು ಎಂದು ನಾನು ಕೇಳಿರುವ ಪ್ರಶ್ನೆಗೆ 15,481 ಅನಿಲ ಯಂತ್ರಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದ್ದಾರೆ. ಆದರಲ್ಲಿ ಕೆಟ್ಟು ಹೋಗಿರತಕ್ಕ ಅನಿಲ ಯಂತ್ರಗಳು ಎಷ್ಟು ಎಂದು ಕೇಳಿರುವುದಕ್ಕೆ ಸುಮಾರು 2000 ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ದುರಸ್ತಿ ಬಗ್ಗೆ ಸರ್ಕಾರ ಕೈಗೊಂಡಿರುವರ ಕಾರ್ಯವೇನು ಎಂದು ನಾನು ಕೇಳಿರುವುದಕ್ಕೆ ಒಂದು ಅನಿಲ ಸ್ಥಾವರಕ್ಕೆ 2,500 ರೂ. ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. 400 ಅನಿಲ ಸ್ಥಾವರಕ್ಕೆ ಈಗಾಗಲೇ ಹಣವನ್ನೊದಗಿಸಿದ್ದೇವೆಂದು ಹೇಳಿದ್ದಾರೆ. ಸುಮಾರು 2000 ಅನಿಲ ಸ್ಥಾವರಗಳು ಕೆಟ್ಟು ಹೋಗಿರುವುದರಿಂದ ಇನ್ನು 1600 ಯಂತ್ರಗಳಿಗೆ ಏತಕ್ಕೆ ಹಣವನ್ನು ಕೊಟ್ಟಿಲ್ಲ ಎಂದು ಸನ್ಮಾನ್ಯ ಸಚಿವರನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಈ ಅನಿಲ ಯೋಜನೆಯ ಪ್ರಕಾರ ವಾಸ್ತವವಾಗಿ ಕೊಡಬೇಕಾದುದು 1,400 ರೂ.ಗಳು ಮಾತ್ರ. ಆದರೆ ನಾವು ಕೇಂದ್ರ ಸರ್ಕಾರಕ್ಕೆ ವಿಶೇಷವಾಗಿ ಬರೆದ ನಂತರ ಅವರು 2,500 ರೂ. ಕೊಡುವುದಕ್ಕೆ ಒಪ್ಪಿದ್ದಾರೆ. ಆದರೆ ಹೆಚ್ಚಿಗೆ ಕೊಡಬೇಕಾದರೆ ಎಲ್ಲೆಲ್ಲಿ ಅವಶ್ಯಕತೆ ಇದೆ ಅದನ್ನು ಸ್ಪೆಷಲ್ ಕೇಸ್ ಎಂದು ಮಾಡಿ ಅವರ ಮಂಜೂರಾತಿಯನ್ನು ತೆಗೆದುಕೊಂಡು ಕೊಡಬೇಕಾಗುತ್ತದೆ. ಅಂಥಾದ್ದು ಯಾವುದಾದರೂ ಪ್ರಕರಣ ಇದ್ದರೆ ಅದನ್ನು ತಾವು ನನ್ನ ಗಮನಕ್ಕೆ ತಂದರೆ ಮಂಜೂರಾತಿಯನ್ನು ತೆಗೆದುಕೊಂಡು ಹಣ ಕೊಡಿಸುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಎಸ್. ರುದ್ರಪ್ಪ : ಕೇಂದ್ರದವರು ಕೊಡುತ್ತಿರುವ ಹಣ 2,500 ರೂ. ಆದರೆ ಉಳಿದ ಹಣವನ್ನು ರೈತರು ಹಾಕಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಅವರು ಹಣವನ್ನೂ ಹಾಕಿಕೊಳ್ಳುವುದಕ್ಕಾಗುವುದಿಲ್ಲ; ಮತ್ತು ಗೊಬ್ಬರ ಹಾಕಿಕೊಳ್ಳುವುದಕ್ಕೂ ಆಗುವುದಿಲ್ಲ ಹಾಕಿದ ಗೊಬ್ಬರವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ, ಅವು ಏನಾದರೂ ಬಿರುಕನ್ನು, ಬಿಟ್ಟರೆ ಆ ಬಿರುಕನ್ನೂ ಮುಚ್ಚಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದರೆ ಸರ್ಕಾರದವರು ಇದಕ್ಕೆ ಏನು ಮಾಡಬೇಕೆಂದು ನಿಮ್ಮ ಅಭಿಪ್ರಾಯ?

ಮಹದಾಯೀ ಯೋಜನೆ ಬಗ್ಗೆ

2036 - ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-